ECA ನಂ. 20/2023 – –

ಪಿ ಡಬ್ಲ್ಯೂ –1

ದಿನಾಂಕಃ 10.06.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ –

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಪೊಲೀಸ್ ದಾಖಲಾತಿಗಳನ್ನು ಹಾಜುರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 1 ಎಂದು ಗುರುತಿಸಲಾಯಿತು. ಅಂಗನ್ಯೂನತಾ ಪ್ರಮಾಣ ಪತ್ರವನ್ನು ನಿಪಿ–2 ಎಂದು. 2 ವೈದ್ಯರ ಸಲಹಾ ಚೀಟಿಗಳನ್ನು ಹಾಜುರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 3 ಎಂದು ಗುರುತಿಸಲಾಯಿತು. 3 ಒಪಿಡಿ ದಾಖಲೆಗಳನ್ನು ಒಟ್ಟಾಗಿ ನಿಪಿ–4 ಎಂದು, ಸಿ ಟಿ ಸ್ಕಾನ್ ವರದಿಯನ್ನು ನಿಪಿ–5 ಎಂದು, 1 X–Ray and one CT Scan films ಗಳನ್ನು ಹಾಜರುಪಡಿಸಿದ್ದು ಒಟ್ಟಾಗಿ ನಿಪಿ–6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ –</u>

1 ನೇ ಎದುರುದಾರ ನನ್ನ ಅಣ್ಣ ಎಂದರೆ ಸರಿ. ಈಗ ಸಾಕ್ಷಿಗೆ ರೇಷನ್ ಕಾರ್ಡ ನ ಜೆರಾಕ್ಸ ಪ್ರತಿ ತೋರಿಸಲಾಗುತ್ತಿದ್ದು ಸಾಕ್ಷ ನೋಡಿ ಗುರುತಿಸಿದ ಮೇರೆಗೆ ನಿರ್–1 ಎಂದು ಗುರುತಿಸಲಾಯಿತು. ನಿಆರ್–1 ರಲ್ಲಿ ನಾನು, ನನ್ನ ತಂದೆ ತಾಯಿ ಹಾಗೂ ನನ್ನ ಅಣ್ಣ ಕೂಡಿ ವಾಸವಾಗಿರುವುದು ಕಂಡು ಬರುತ್ತದೆ ಎಂದರೆ ಸರಿ.

ಈಗ ಸಾಕ್ಷಿಗೆ ಆದಾರ್ ಕಾರ್ಡ ನ ಜೆರಾಕ್ಸ ಪ್ರತಿ ತೋರಿಸಲಾಗುತ್ತಿದ್ದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿರ್–2 ಎಂದು ಗುರುತಿಸಲಾಯಿತು. ನಿರ್–2 ದಾಖಲಾತಿ ನನ್ನ ಅಣ್ಣನಿಗೆ ಸೇರಿದ್ದು ಎಂದರೆ ಸರಿ. ಈಗ ಸಾಕ್ಷಿಗೆ ಚುನಾವಣಾ ಗುರುತಿನ ಚೀಟಿ ಹಾಗೂ ಆದಾರ್ ಕಾರ್ಡ ನ ಜೆರಾಕ್ಸ ಪ್ರತಿ ತೋರಿಸಲಾಗುತ್ತಿದ್ದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿರ್–3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳು ನನಗೆ ಸೇರಿದ್ದವು ಎಂದರೆ ಸರಿ. ಈಗ ಸಾಕ್ಷಿಗೆ ಕೆಎ 17 ಸಿ 4139 ರ ವಾಹನದ ಆರ್ ಸಿ ಯ ಜೆರಾಕ್ಸ ಪ್ರತಿ ತೋರಿಸಲಾಗುತ್ತಿದ್ದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಆರ್–5 ಎಂದು ಗುರುತಿಸಲಾಯಿತು. ಸದರಿ ದಾಖಲೆ ನನ್ನ ಅಣ್ಣನ ಹೆಸರಿನಲ್ಲಿದೆ ಎಂದರೆ ಸರಿ. ಈಗ ಸಾಕ್ಷಿಗೆ ಡಿ ಎಲ್ ನ ಜೆರಾಕ್ಸ ಪ್ರತಿ ತೋರಿಸಲಾಗುತ್ತಿದ್ದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಆರ್–6 ಎಂದು ಗುರುತಿಸಲಾಯಿತು. ಸದರಿ ದಾಖಲೆ ನನ್ನ ಹೆಸರಿನಲ್ಲಿದೆ ಎಂದರೆ ಸರಿ.

ನಾನು ಕೆಲಸ ಮಾಡುವ ಸಮಯದಲ್ಲಿ ಅಪಘಾತವಾಗಿದೆ ಪರಿಹಾರ ನೀಡುವಂತೆ ಕೋರಿ ನನ್ನ ಅಣ್ಣನಾದ 1 ನೇ ಎದುರುದಾರನಿಗೆ ಲಿಖಿತವಾಗಿ ಯಾವುದೇ ನೋಟೀಸು ನೀಡಿಲ್ಲ. ನಿಆರ್–1 ರಿಂದ 6 ದಾಖಲಾತಿಗಳಲ್ಲಿ ಎಲ್ಲದರಲ್ಲೂ ಒಂದೇ ವಿಳಾಸ ಇದೆ ಎಂದರೆ ಸರಿ. ನನ್ನ ತಂದೆ, ತಾಯಿ ಮತ್ತು ಅಣ್ಣ ಎಲ್ಲಾ ಕೂಡಿ ಒಂದೇ ಮನೆಯಲ್ಲಿ ವಾಸವಾಗಿದ್ದು ನನ್ನ ಹಾಗೂ ನನ್ನ ಅಣ್ಣನ ನಡುವೆ ಯಾವುದೇ ಕಾರ್ಮಿಕ ಹಾಗೂ ಮಾಲೀಕ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಜೊತೆ ಕೆಲಸ ಮಾಡುವಾಗ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಜೊತೆ ನಾನು ಯಾವುದೇ ಕೆಲಸ ಮಾಡದ ಕಾರಣ ನನ್ನ ಅಣ್ಣನಿಗೆ ನಾನು ಲಿಖಿತವಾಗಿ ಯಾವುದೇ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ ನನ್ನ ಅರ್ಜಿಯಲ್ಲಿ ನನ್ನ ವಿಳಾಸವನ್ನು ತಪ್ಪಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅರ್ಜಿಯಲ್ಲಿ ನಮೂದಿಸಿರುವ ವಿಳಾಸದಲ್ಲಿ ನಾನು ಎಂದಿಗೂ ವಾಸವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಚಾಲನಾ ರಹದಾರಿ ನನ್ನ ಬಳಿಯೇ ಹಾಲಿ ಇದೆ. ಕೆಎ 17 ಸಿ 4139 ರ ವಾಹನವು ಪ್ರಯಾಣಿಕರನ್ನು ಸಾಗಿಸುವ ಆಟೋ ಎಂದರೆ ಸರಿ. ನಾನು ಪ್ರಯಾಣಿಕರನ್ನು ಸಾಗಣೆ ಮಾಡಲು ಚಾಲನಾ ರಹದಾರಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನತೆ ಇಲ್ಲದೇ ಇದ್ದರೂ ಸಹ ಸುಳ್ಳು ಅಂಗನ್ಯೂನತೆ ದಾಖಲಾತಿಯನ್ನು ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಡಾಃ ನಿತಿನ್ ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ನೆರವೇರಿಸಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ನನ್ನ ಯಾವುದೇ ಸಹಿಯಾಗಲೀ ಹೆಬ್ಬೆಟ್ಟಿನ ಗುರುತು ಇಲ್ಲ ಎಂದರೆ ಸರಿ. ಚಿಕಿತ್ಸೆಗಾಗಿ ನಾನು 50 ಸಾವಿರ ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ತೀವ್ರ ತರವಾದ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ನನಗೆ ತಿಂಗಳಿಗೆ 20 ಸಾವಿರ ಮತ್ತು ದಿನಕ್ಕೆ 200 ರೂ ಭತ್ಯೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಅಣ್ಣನ ಬಳಿ ತಿಂಗಳಿಗೆ 20 ಸಾವಿರ ಮತ್ತು ದಿನಕ್ಕೆ 200 ರೂ ಭತ್ಯೆ ಪಡೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 2 ನೇ ಎದುರುದಾರ ವಿಮಾ ಕಂಪನಿಯವರು ಯಾವುದೇ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ನನ್ನ ಅಣ್ಣನಾದ 1 ನೇ ಎದುರುದಾರ ಏನು ತಕರಾರು ಸಲ್ಲಿಸಿದ್ದಾನೆ ಎಂದು ನಾನು ತಿಳಿದುಕೊಂಡಿಲ್ಲ. ನಾನು, ನನ್ನ ತಂದೆ ತಾಯಿ ಅಣ್ಣ ಬೇರೆ ಬೇರೆ ವಾಸ ಇದ್ದ ಬಗ್ಗೆ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ